


# ಜಿಪಿಎಸ್ V/s ನಾವಿಕ್

## ಸದ್ಯದಲ್ಲೇ ಸ್ಮಾರ್ಟ್‌ಫೋನ್‌ಗಳಿಗೆ ಲಗ್ಗೆಯಿಡಲಿದೆ 'ಇಸ್ರೊ' ರೂಪಿತ 'ನಾವಿಕ್'

ಸ್ಮಾರ್ಟ್‌ಫೋನ್‌ಗಳಲ್ಲಿ ದೊರೆಯುವ ಸವಲತ್ತುಗಳಲ್ಲಿ 'ಜಿಪಿಎಸ್' (GPS ಗ್ಲೋಬಲ್ ಪೊಸಿಷನಿಂಗ್ ಸಿಸ್ಟಂ) ಪ್ರಮುಖವಾದುದು. ಅದನ್ನು ರೇಡಿಯೊ ನಾವಿಗೇಷನ್ ಸಿಸ್ಟಂ ಎಂದೂ ಕರೆಯುವುದುಂಟು. 'ನೀವು ಎಲ್ಲಿದ್ದೀರಿ, ಎಲ್ಲಿ ಇರಬೇಕು, ಮತ್ತು ಅಲ್ಲಿಗೆ ಹೇಗೆ ಹೋಗುವುದು' ಎಂಬುದನ್ನು ನಿಖರವಾಗಿ ತಿಳಿದುಕೊಳ್ಳಲು ಜಿಪಿಎಸ್ ಅತ್ಯಗತ್ಯ. 'ಜಿಪಿಎಸ್' ಜಾಗಕ್ಕೀಗ ಲಗ್ಗೆಯಿಡಲು 'ನಾವಿಕ್' ಸಜ್ಜಾಗಿದೆ.

**■ ಶಶಿಕುಮಾರ್ ಸಿ.**

ಊರು ಸುತ್ತುವವರ ಪಾಲಿಗೆ 'ಜಿಪಿಎಸ್' ಕೈಮರದಂತೆ ಒದಗಿಬರುವ ತಂತ್ರಜ್ಞಾನ. ಈ ಜಿಪಿಎಸ್‌ಗೆ ಪರ್ಯಾಯವಾಗಿ 'ನಾವಿಕ್' (ನಾವಿಗೇಷನ್ ವಿಥ್ ಇಂಡಿಯನ್ ಕನ್‌ಸ್ಟೆಲೇಷನ್ **Navigation with Indian ConstellationNavIC**) ಅನ್ನುವ ಹೊಸ ಮಾರ್ಗಸೂಚಿ ವ್ಯವಸ್ಥೆಯನ್ನು ಅಮೆರಿಕದ ಚಿಪ್ ತಯಾರಿಕಾ ಕಂಪನಿಯಾದ ಕ್ವಾಲ್ಕಾಮ್ ಸಹಭಾಗಿತ್ವದಲ್ಲಿ 'ಬಾಹ್ಯಾಕಾಶ ಸಂಶೋಧನಾ ಸಂಸ್ಥೆ' (ಇಸ್ರೊ) ಅಭಿವೃದ್ಧಿಪಡಿಸಿದೆ. ಇದು 'ಇಂಡಿಯನ್ ರೀಜನಲ್ ನಾವಿಗೇಷನ್ ಸ್ಯಾಟಲೈಟ್ ಸಿಸ್ಟಂ' ಆಗಿ ಕಾರ್ಯ ನಿರ್ವಹಿಸಲಿದೆ.

'ನಾವಿಕ್' ತಂತ್ರಜ್ಞಾನವನ್ನು ಅಳವಡಿಸಿರುವ ಮೂರು ಸ್ನ್ಯಾಪ್‌ಡ್ರ್ಯಾಗನ್ ಚಿಪ್‌ಸೆಟ್‌ಗಳನ್ನು ಕ್ವಾಲ್ಕಾಮ್ ಕಂಪನಿಯು ಬಿಡುಗಡೆ ಮಾಡಿದೆ. ಈ ಮೂಲಕ ಸ್ಮಾರ್ಟ್‌ಫೋನ್‌ಗಳಲ್ಲಿ ಭಾರತದ್ದೇ ಮಾರ್ಗಸೂಚಿ ವ್ಯವಸ್ಥೆಯನ್ನು ಬಳಸುವ ಕಾಲ ಸಮೀಪದಲ್ಲೇ ಇದೆ.

ಕ್ವಾಲ್ಕಾಮ್ ಕಂಪನಿ ಈಚೆಗೆ ಬಿಡುಗಡೆ ಮಾಡಿರುವ ಸ್ನ್ಯಾಪ್‌ಡ್ರ್ಯಾಗನ್ 720ಜಿ, ಸ್ನ್ಯಾಪ್‌ಡ್ರ್ಯಾಗನ್ 662 ಹಾಗೂ ಸ್ನ್ಯಾಪ್‌ಡ್ರ್ಯಾಗನ್ 460 ಮಾದರಿಯ ಚಿಪ್‌ಗಳಲ್ಲಿ 'ನಾವಿಕ್' ವ್ಯವಸ್ಥೆಯು ಒಳಗೊಂಡಿದೆ. ಇಸ್ರೊ ಅಭಿವೃದ್ಧಿ ಪಡಿಸಿರುವ ಏಳು ಉಪಗ್ರಹಗಳ ಸಂವಹನ ಆಧರಿಸಿ ಜಿಪಿಎಸ್‌ಗಿಂತಲೂ ನಿಖರ ಮಾರ್ಗಸೂಚಿ ಮಾಹಿತಿಯನ್ನು 'ನಾವಿಕ್' ನೀಡಲಿದೆ. ಅಲ್ಲದೆ ಮೂರೂ ಮಾದರಿಯ ಚಿಪ್‌ಗಳಲ್ಲಿ ಕ್ವಾಲ್ಕಾಮ್ ಕೃತಕ ಬುದ್ಧಿಮತ್ತೆ (ಎಐ) ಎಂಜಿನ್ ಹಾಗೂ ಲೊಕೇಷನ್ ವ್ಯವಸ್ಥೆಯನ್ನು ಇದು ಒಳಗೊಂಡಿದೆ. 'ನಾವಿಕ್'ಗೆ ಸಹಕಾರಿಯಾಗಬಲ್ಲ ಮೊಬೈಲ್ ಚಿಪ್‌ಗಳನ್ನು ಇದೇ ಮೊದಲ ಬಾರಿಗೆ ಕಂಪನಿಯು ಅಭಿವೃದ್ಧಿ ಪಡಿಸಿದೆ.

ಕ್ವಾಲ್ಕಾಮ್ ತನ್ನ ಸ್ನ್ಯಾಪ್‌ಡ್ರ್ಯಾಗನ್ 720, 662, 460 ಚಿಪ್‌ಸೆಟ್‌ಗಳಲ್ಲಿ 'ನಾವಿಕ್' (**Navigation with Indian ConstellationNavIC**) ಅನ್ನು ಅಳವಡಿಸಿ ಮಾರುಕಟ್ಟೆಗೆ ಈಗಾಗಲೇ ಬಿಡುಗಡೆ ಮಾಡಿದೆ. ಈ ಚಿಪ್‌ಗಳನ್ನು ಹೊಂದಿದ ಸ್ಮಾರ್ಟ್‌ಫೋನ್‌ಗಳ ತಯಾರಿ ಪ್ರಕ್ರಿಯೆ ಇನ್ನಷ್ಟೇ ಆಗಬೇಕಿದೆ. ಈ ವರ್ಷದ ಮೊದಲ ತ್ರೈಮಾಸಿಕದಲ್ಲಿ ಸ್ನ್ಯಾಪ್‌ಡ್ರ್ಯಾಗನ್ 720ಜಿ ಚಿಪ್ ಒಳಗೊಂಡಿರುವ ಸ್ಮಾರ್ಟ್‌ಫೋನ್ ಮಾರುಕಟ್ಟೆಗೆ ಬರುವ ಸಾಧ್ಯತೆ ಇದೆ. ಇದು ಸಾಧ್ಯವಾದರೆ ಭಾರತೀಯರು ಭಾರತದ್ದೇ ಆದಂತಹ ಮಾರ್ಗಸೂಚಿ ವ್ಯವಸ್ಥೆಯ (ಜಿಪಿಎಸ್ ಮಾದರಿಯ) ಸೇವೆಯನ್ನು ಹೊಂದಲಿದ್ದಾರೆ. ಅಮೆರಿಕದ ಜಿಪಿಎಸ್, ರಷ್ಯಾದ ಗ್ಲೊನಾಸ್, ಯೂರೋಪ್‌ನ ಗೆಲಿಲಿಯೊ ಹಾಗೂ ಚೀನಾದ ಬೀಡೌನ ಮಾರ್ಗಸೂಚಿ ವ್ಯವಸ್ಥೆಗಳ ಸಾಲಿಗೆ ಭಾರತದ 'ನಾವಿಕ್' ಸಹ ಸೇರಲಿದೆ.